**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ದಿನಾಂಕ 10 ನೇ ಮಾಹೆ ಫೆಬ್ರವರಿ 2023**

**ಸಿ.ಸಿ.ಸಂ.481/2019**

ಪಿರ್ಯಾದುದಾರರು : ರಾಜ್ಯದ ಪರ ಬೆಟ್ಟದಪುರ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

ವಿರುದ್ಧ

ಆರೋಪಿ :7. ದೇವರಾಜೇಗೌಡ,
ಬಿನ್ ದೊಡ್ಡೇಗೌಡ,
ವಯಸ್ಸು 45 ವರ್ಷ,
ವಾಸಃ ಮನುಗನಹಳ್ಳಿ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

**ದೋಷಾರೋಪಣೆ**

ಶ್ರೀಮತಿ.ಶ್ವೇತ.ಜೆ., *ಬಿ.ಕಾಂ., ಎಲ್.ಎಲ್.ಬಿ,* ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಅಂದರೆ, 7 ನೇ ಆರೋಪಿ ವಿರುದ್ದ ಮಾಡುವ ಆಪಾದನೆ ಏನೆಂದರೆ,

ಮೊದಲನೇಯದಾಗಿ, ಆರೋಪಿಯಾದ ನೀವು, ದಿನಾಂಕ 20.03.2016 ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ, 7 ನೇ ಆರೋಪಿಯಾದ ನೀವು 1 ರಿಂದ 6 ನೇ ಆರೋಪಿಗಳೊಂದಿಗೆ ಏಕೋದ್ದೇಶದಿಂದ, ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು ಮನುಗನಹಳ್ಳಿ ಗ್ರಾಮದಲ್ಲಿ ಅಕ್ರಮ ಗುಂಪು ಕಟ್ಟಿಕೊಂಡು ಹಾಲು ಉತ್ಪಾದಕರ ಸಂಘದ ಚುನಾವಣಾ ಸಂದರ್ಭದಲ್ಲಿ ಸದರಿ ಸ್ಥಳಕ್ಕೆ ಅಪರಾಧಿಕ ಅತಿಕ್ರಮ ಪ್ರವೇಶ ಮಾಡಿರುತ್ತೀರಿ, ಆ ಮೂಲಕ 1 ರಿಂದ 7 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.143 ಸಹವಾಚಕ 149 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು

ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 7 ನೇ ಆರೋಪಿಯಾದ ನೀವು 1 ರಿಂದ 6 ನೇ ಆರೋಪಿಗಳೊಂದಿಗೆ ಏಕೋದ್ದೇಶದಿಂದ, ಮತದಾನ ಕೇಂದ್ರದೊಳಗೆ ನುಗ್ಗಿ ಅಕ್ರಮ ಪ್ರವೇಶ ಮಾಡಿರುತ್ತೀರಿ, ಆ ಮೂಲಕ 1 ರಿಂದ 7 ನೇ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.448 ಸಹವಾಚಕ 149 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 7 ನೇ ಆರೋಪಿಯಾದ ನೀವು 1 ರಿಂದ 6 ನೇ ಆರೋಪಿಗಳೊಂದಿಗೆ ಏಕೋದ್ದೇಶದಿಂದ, ಚಾಸಾ.1 ಪುಷ್ಪಗಿರಿ.ಕೆ.ಹೆಚ್ ರವರನ್ನು ಹಿಡಿದು ಎಳೆದಾಡಿ ಅವರಿಗೆ ಅಕ್ರಮ ತಡೆವುಂಟು ಮಾಡಿರುತ್ತೀರಿ, ಆ ಮೂಲಕ 1 ರಿಂದ 7 ನೇ ಆರೋಪಿಗಳಾದ ನೀವುಗಳು **ಭಾರತ ದಂಡ ಸಂಹಿತೆ ಕಲಂ.341 ಸಹವಾಚಕ 149 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 7 ನೇ ಆರೋಪಿಯಾದ ನೀವು 1 ರಿಂದ 6 ನೇ ಆರೋಪಿಗಳೊಂದಿಗೆ ಏಕೋದ್ದೇಶದಿಂದ, ಚಾಸಾ.1 ಪುಷ್ಪಗಿರಿ, ಚಾಸಾ.2 ರವಿಕುಮಾರ್ ಮತ್ತು ಚಾಸಾ.3 ಆನಂದ.ಎಸ್ ರವರುಗಳ ಮೈಕೈಗೆ 1 ಮತ್ತು 2 ನೇ ಆರೋಪಿರವರು ತಮ್ಮ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿರುತ್ತೀರಿ, ಆ ಮೂಲಕ 1 ರಿಂದ 7 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ 149 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 7 ನೇ ಆರೋಪಿಯಾದ ನೀವು 1 ರಿಂದ 6 ನೇ ಆರೋಪಿಗಳೊಂದಿಗೆ ಏಕೋದ್ದೇಶದಿಂದ, 3 ನೇ ಆರೋಪಿತನು ಕರ್ತವ್ಯದಲ್ಲಿದ್ದ ಚಾಸಾ.1 ರಂಗಸ್ವಾಮಿಶೆಟ್ಟಿರವರ ಸಮವಸ್ತ್ರವನ್ನು ಹಿಡಿದು

ಹರಿದು ಹಾಕಿರುತ್ತೀರಿ, ಆ ಮೂಲಕ 1 ರಿಂದ 7 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.353 ಸಹವಾಚಕ 149 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಆರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 7 ನೇ ಆರೋಪಿಯಾದ ನೀವು 1 ರಿಂದ 6 ನೇ ಆರೋಪಿಗಳೊಂದಿಗೆ ಏಕೋದ್ದೇಶದಿಂದ, 3 ನೇ ಆರೋಪಿತನು ಚಾಸಾ.1 ರಂಗಸ್ವಾಮಿಶೆಟ್ಟಿರವರ ಕರ್ತವ್ಯವನ್ನು ನಿರ್ವಹಿಸಲು ಅಡ್ಡಿಪಡಿಸಿರುತ್ತಾರೆ, ಆ ಮೂಲಕ 1 ರಿಂದ 7 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.332 ಸಹವಾಚಕ 149 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಏಳನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 7 ನೇ ಆರೋಪಿಯಾದ ನೀವು 1 ರಿಂದ 6 ನೇ ಆರೋಪಿಗಳೊಂದಿಗೆ ಏಕೋದ್ದೇಶದಿಂದ, ಮತದಾನ ಕೇಂದ್ರದಲ್ಲಿದ್ದ ಚುನಾವಣಾ ಪತ್ರಗಳನ್ನು ಹರಿದು ಹಾಕಿ ಮತ್ತು ಮತದಾನ ಸಾಮಾಗ್ರಿಗಳನ್ನು ಚೆಲ್ಲಾಪಿಲ್ಲಿ ಮಾಡಿ ರೂ.25,000/- ಗಳಷ್ಟು ನಷ್ಟ ಉಂಟು ಮಾಡಿರುತ್ತೀರಿ, ಆ ಮೂಲಕ 1 ರಿಂದ 7 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.427 ಸಹವಾಚಕ 149 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಎಂಟನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 7 ನೇ ಆರೋಪಿಯಾದ ನೀವು 1 ರಿಂದ 6 ನೇ ಆರೋಪಿಗಳೊಂದಿಗೆ ಏಕೋದ್ದೇಶದಿಂದ, ಹಾಲು ಉತ್ಪಾದಕರ ಸಂಘದ ಚುನಾವಣಾ ಸಮಯದಲ್ಲಿ ಶಾಂತಿಯುತ ಮತದಾನ ಪ್ರಕ್ರಿಯೆಗೆ ಭಂಗವುಂಟು ಮಾಡಿರುತ್ತೀರಿ, ಆ ಮೂಲಕ 1 ರಿಂದ 7 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.171(ಸಿ) ಸಹವಾಚಕ 149 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 7 ನೇ ಆರೋಪಿಯಾದ ನೀವು 1 ರಿಂದ 6 ನೇ ಆರೋಪಿಗಳೊಂದಿಗೆ ಏಕೋದ್ದೇಶದಿಂದ, ಮತದಾನ ಕೇಂದ್ರದಲ್ಲಿದ್ದ ಚುನಾವಣಾ ಪತ್ರಗಳನ್ನು ಹರಿದು ಹಾಕಿರುತ್ತೀರಿ, ಆ ಮೂಲಕ 1 ರಿಂದ 7 ನೇ ಆರೋಪಿಗಳಾದ ನೀವುಗಳು **ಜನ ಪ್ರತಿನಿಧಿ ಕಾಯ್ದೆ ಕಲಂ.135 ಮತ್ತು 136 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿದ್ದೇನೆ.

**(ಶ್ವೇತ.ಜಿ)**
ಹೆಚ್ಚುವರಿ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ,
ಪಿರಿಯಾಪಟ್ಟಣ.